ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

**ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ನಡವಳಿಗಳು.**

ವಿಷಯ:- ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಲಿಖಿತ ಪರೀಕ್ಷೆಯಲ್ಲಿ ದುರ್ನಡತೆ ಎಸಗಿರುವ ಶ್ರೀ ಭೀಮಪ್ಪ ಹುಲ್ಲೋಳಿ ಎಂಬ ಅಭ್ಯರ್ಥಿಯನ್ನು ಮುಂದಿನ ಪರೀಕ್ಷೆಗಳಿಗೆ ನಿಷೇಧಿಸುವ ಬಗ್ಗೆ.

ಉಲ್ಲೇಖ:- 1) ಶಿವಮೊಗ್ಗ ಜಿಲ್ಲೆಯ ಕೋಟೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 156/2020 ಕಲಂ 120(ಬಿ), 149, 420 ಸಹಿತ 34 ಐಪಿಸಿ ದಿನಾಂಕ: 23.12.2020.
2) ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆಯ ಪತ್ರ ಸಂಖ್ಯೆ:ಸಿಬ್ಬಂದಿ(1)/ ಸಿಪಿಸಿ ನೇಮಕಾತಿ/38 ಸಿಪಿಸಿ+12 ಮಪಿಸಿ/ 2020-21 ದಿನಾಂಕ: 29.12.2020.
3) ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರ ರವರ ಪತ್ರ ಸಂಖ್ಯೆ: ಸಿಓಪಿ/ಸಿಸಿಆರ್‌ಬಿ/ಹುಧಾ/892/2020 ದಿನಾಂಕ: 11.12.2020.

**ಪ್ರಸ್ತಾವನೆ:-**

ಅಧಿಸೂಚನೆ ಸಂಖ್ಯೆ: 02/ನೇಮಕಾತಿ-4/2020-21 ದಿನಾಂಕ:07.05.2020 (ಎನ್‌ಕೆಕೆ) (2007 ಹುದ್ದೆಗಳು) ಮತ್ತು 13/ನೇಮಕಾತಿ-4/2019-20 ದಿನಾಂಕ:23.04.2020 (ಕೆಕೆ) (558 ಹುದ್ದೆಗಳು) ರನ್ವಯ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ & ಮಹಿಳಾ) ಹುದ್ದೆಗಳಿಗೆ ದಿನಾಂಕ: 20.09.2020 ರಂದು ಲಿಖಿತ ಪರೀಕ್ಷೆಯನ್ನು ರಾಜ್ಯಾದ್ಯಂತ ವಿವಿಧ ಕೇಂದ್ರಗಳಲ್ಲಿ ನಡೆಸಲಾಗಿರುತ್ತದೆ.

ಉಲ್ಲೇಖ(3)ರ ಪತ್ರದಲ್ಲಿ ಸದರಿ ಪರೀಕ್ಷೆಯ ದಿನದಂದು ಗೋಕುಲ ರೋಡ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 61/2020 ಕಲಂ: 120(ಬಿ), 419, 420 ಐಪಿಸಿ ಪ್ರಕರಣದಲ್ಲಿ ದಸ್ತಗಿರಿಯಾಗಿರುವ ಆರೋಪಿ ಅಡಿವೆಪ್ಪ ತಂದೆ ಯಲ್ಲಪ್ಪ ಯರಗುದ್ರಿ ಸಾ: ಹಡಗಿನಾಳ ತಾ॥ ಗೋಕಾಕ, ಬೆಳಗಾವಿ ಜಿಲ್ಲೆ ಈತನು ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಯ ಅಭ್ಯರ್ಥಿಯಾದ ಭೀಮಪ್ಪ @ ಭೀಮೇಶಿ ತಂದೆ ಮಹಾದೇವ ಹುಲ್ಲೋಳಿ ವಾಸ ಉದಗಟ್ಟಿ ಗ್ರಾಮ, ಗೋಕಾಕ ತಾ॥ ಬೆಳಗಾವಿ ಜಿಲ್ಲೆ ಈತನ ಬದಲಿಗೆ ಶಿವಮೊಗ್ಗ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ: 20.09.2020 ರಂದು ನಡೆದ ನಾಗರೀಕ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಲಿಖಿತ ಪರೀಕ್ಷೆ ಬರೆದಿರುವನೆಂದು ವಿಚಾರಣೆ ಸಮಯದಲ್ಲಿ ತಿಳಿದುಬಂದಿದ್ದು, ಮುಂದಿನ ಕಾನೂನು ರೀತಿ ಕ್ರಮ ಜರುಗಿಸುವಂತೆ ಎಸ್.ಪಿ, ಶಿವಮೊಗ್ಗ ಜಿಲ್ಲೆ ರವರಿಗೆ ತಿಳಿಸಿರುತ್ತಾರೆ.

ಈ ಸಂಬಂಧ ದಿನಾಂಕ: 23.12.2020 ರಂದು ಪಿ.ಎಸ್.ಐ. ಕೋಟೆ ಪೊಲೀಸ್ ಠಾಣೆ ರವರು ಶಿವಮೊಗ್ಗ ಜಿಲ್ಲಾ ಪೊಲೀಸ್ ಕಚೇರಿಗೆ ಬೇಟಿ ನೀಡಿ, ಶಿವಮೊಗ್ಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿ ನಗರ ಇಲ್ಲಿ ದಿನಾಂಕ: 20.09.2020 ರ ಪರೀಕ್ಷಾ ದಿನದ ವೀಡಿಯೋಗಳನ್ನು ಮತ್ತು ನಾಮಿನಲ್ ರೋಲ್ ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಆರೋಪಿ ಅಡಿವೆಪ್ಪ ತಂದೆ ಯಲ್ಲಪ್ಪ ಯರಗುದ್ರಿ ಈತನು ಅಭ್ಯರ್ಥಿಯಾದ ಭೀಮಪ್ಪ @ ಭೀಮೇಶಿ ತಂದೆ ಮಹಾದೇವ ಹುಲ್ಲೋಳಿ, ಅರ್ಜಿ ಸಂಖ್ಯೆ: 4359436, ನೊಂದಣಿ ಸಂಖ್ಯೆ: 5471539

ಈತನ ಬದಲಿಗೆ ಅಭ್ಯರ್ಥಿಯಂತೆ ನಟಿಸಿ ಪರೀಕ್ಷೆ ಬರೆದಿರುವುದು ಕಂಡುಬಂದಿದ್ದರಿಂದ ಆರೋಪಿ ಅಡಿವೆಪ್ಪ ಮತ್ತು ಅಭ್ಯರ್ಥಿ ಭೀಮಪ್ಪ @ ಬೀಮೆಶಿ ವಿರುದ್ಧ ಶಿವಮೊಗ್ಗ ಕೋಟೆ ಠಾಣೆ ಅಪರಾಧ ಸಂಖ್ಯೆ: 156/2020 ಕಲಂ 120(ಬಿ), 149, 420 ಸಹಿತ 34 ಐಪಿಸಿನ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆಂದು ಉಲ್ಲೇಖ(2)ರ ಪತ್ರದಲ್ಲಿ ವರದಿಯನ್ನು ನೀಡಿರುತ್ತಾರೆ. ಸದರಿ ಪ್ರಕರಣದಲ್ಲಿ ಭಾಗಿಯಾದ ಅಭ್ಯರ್ಥಿಯ ವಿವರವು ಈ ಕೆಳಕಂಡಂತಿದೆ.

| ಕ್ರ. ಸ. | ಅರ್ಜಿ ಸಂಖ್ಯೆ/ ನೊಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿಳಾಸ |
|---|---|---|---|
| 1 | ಅ.ಸ. 4359436<br>ನೊ.ಸ.5471539 | ಶ್ರೀ ಭೀಮಪ್ಪ ಹುಲ್ಲೋಳಿ | ಉದಗಟ್ಟಿ ಗ್ರಾಮ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ. |

ಸದರಿ ನೇಮಕಾತಿ ಅಧಿಸೂಚನೆ ಸಂಖ್ಯೆ: 02/ನೇಮಕಾತಿ-4/2020-21 (ಎನ್‌ಕೆಕೆ) & 13/ನೇಮಕಾತಿ-4/2019-20 (ಕೆಕೆ) ರಲ್ಲಿ ಕ್ರಮ ಸಂಖ್ಯೆ: (ಎನ್‌ಕೆಕೆ) 18 (S) ಮತ್ತು (ಕಲ್ಯಾಣ ಕರ್ನಾಟಕ) 19 (S) ರ ವಿಶೇಷ ಸೂಚನೆಗಳ ಅಡಿಯಲ್ಲಿ ದುರ್ನಡತೆ ಶೀರ್ಷಿಕೆಯಡಿ ಈ ಕೆಳಗಿನಂತೆ ಸೂಚನೆ ನೀಡಲಾಗಿರುತ್ತದೆ.

"ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಅಥವಾ ಒಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾಗಿರುವ ವಿಷಯವನ್ನು ಮರೆಮಾಚಿ ಮತ್ತೊಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗೆ ಹಾಜರಾದರೆ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು" ಎಂದು ತಿಳಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಹಾಗೂ ಅಧಿಸೂಚನೆಯಲ್ಲಿನ ನಿಬಂಧನೆಗಳನ್ನು ಪರಿಶೀಲಿಸಿ, ನೇಮಕಾತಿ ಕಛೇರಿಯ ಮುಖ್ಯಸ್ಥರಾದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, (ನೇಮಕಾತಿ) ಆದ ನಾನು ಈ ಕೆಳಕಂಡಂತೆ ಆದೇಶಿಸುತ್ತೇನೆ.

**ಆದೇಶ ಸಂಖ್ಯೆ: 02/ನೇಮಕಾತಿ-4/2020-21, ದಿನಾಂಕ: 13.01.2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗೆ ಅರ್ಜಿ ಸಲ್ಲಿಸಲಾದ ಶ್ರೀ ಭೀಮಪ್ಪ ಹುಲ್ಲೋಳಿ, ಎಂಬ ಅಭ್ಯರ್ಥಿಯು ತಾನು ಲಿಖಿತ ಪರೀಕ್ಷೆ ಬರೆಯುವ ಬದಲು ತನ್ನ ಸ್ನೇಹಿತನಾದ ಅಡಿವೆಪ್ಪ ತಂದೆ ಯಲ್ಲಪ್ಪ ಯರಗುದ್ರಿ ನನ್ನು ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿ ದುರ್ನಡತೆ ಎಸಗಿದ್ದು, ಈ ಸಂಬಂಧ ಶಿವಮೊಗ್ಗ ಜಿಲ್ಲೆಯ ಕೋಟೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 156/2020 ಕಲಂ 120(ಬಿ), 149,

420 ಸಹಿತ 34 ಐಪಿಸಿ. ಅಪರಾಧ ಮೊಕದ್ದಮೆ ದಾಖಲಾಗಲು ಕಾರಣರಾಗಿ ಸದರಿ ಪ್ರಕರಣದಲ್ಲಿ ಆರೋಪಿಯಾದ ಹಿನ್ನೆಲೆಯಲ್ಲಿ ಶ್ರೀ ಭೀಮಪ್ಪ ಹುಲ್ಲೋಳಿ, ಎಂಬ ಅಭ್ಯರ್ಥಿಯನ್ನು (ಅರ್ಜಿ ಸಂಖ್ಯೆ: 4359436, ನೊಂದಣಿ ಸಂಖ್ಯೆ: 5471539) ಪೊಲೀಸ್ ಇಲಾಖೆಯು ನಡೆಸುವ ವಿವಿಧ ಹುದ್ದೆಯ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗಳಿಗೆ ಖಾಯಂ ಆಗಿ ಡಿಬಾರ್ ಮಾಡಲಾಗಿದೆ **(Permanently Debarred).**

(ಅಮ್ರಿತ್ ಪಾಲ್, ಐಪಿಎಸ್)
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ, ಬೆಂಗಳೂರು

ಗೆ,
ಶ್ರೀ ಭೀಮಪ್ಪ ಹುಲ್ಲೋಳಿ, ಉದಗಟ್ಟಿ ಗ್ರಾಮ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಪ್ರತಿಯನ್ನು:- ಎಲ್ಲಾ ಘಟಕಾಧಿಕಾರಿಗಳಿಗೆ (ನಿಸ್ತಂತು ಅಧಿಕಾರಿ, ಸಿಐಡಿ ಕಛೇರಿ, ಬೆಂಗಳೂರು ರವರಿಗೆ ಶೀಘ್ರ ರವಾನೆಗಾಗಿ)

ಪ್ರತಿಯನ್ನು ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:-
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.